# ಪುಸ್ತಕ ಪರಿಚಯ



**ಅಲ್ಲಮ ಪ್ರಭುದೇವರ ವಚನ—ನಿರ್ವಚನ**
**ಲೇಖಕರು : ಶ್ರೀ ಸಿದ್ಧೇಶ್ವರ ಸ್ವಾಮಿಗಳು**
**ಪ್ರಕಾಶಕರು: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ**
**ರಾಮಾನುಜ ರಸ್ತೆ, ಮೈಸೂರು 570 004**
**ಪುಟ : 1116 + XXVIII ಬೆಲೆ : ರೂ.೩೦೦.೦೦**

**ಹನ್ನೆರಡನೆಯ ಶತಮಾನದ** ವಚನಕಾರರ ಮಧ್ಯದ ಜ್ಞಾನ-ಸೂರ್ಯನಾದ ಅಲ್ಲಮಪ್ರಭುಗಳ ವಚನಗಳು ವಚನಾಧ್ಯಯನಿಗಳಿಗೊಂದು ಸವಾಲು. ಸಂಕೀರ್ಣವಾದ ಸಾಂಕೇತಿಕತೆ, ರೂಪಕಗಳ ಅಭಿವ್ಯಕ್ತಿ –ಇದು ಅಲ್ಲಮರ ವಚನಗಳ ಬಹು ಮುಖ್ಯ ಲಕ್ಷಣ. ಅದ್ವೈತ ದರ್ಶನದ ಅಭೇದ ಜ್ಞಾನದ ದೃಷ್ಟಿಯಿಂದ ಮೂಡಿಬಂದಿರುವ ಸಂಕೇತಗಳು, ರೂಪಕಗಳು ಕೇವಲ ಬುದ್ಧಿಗೆ ಅಥವಾ ಶುಷ್ಕ ತರ್ಕದ ತೆಕ್ಕೆಗೆ ಸಿಗುವುದಿಲ್ಲ. ಅವುಗಳ ಅರ್ಥದ ಆಳವನ್ನು ತಪಸ್ಸಿನಿಂದ, ಧ್ಯಾನದಿಂದ ಪರಿಭಾವಿಸಿ ಅಭಿವ್ಯಕ್ತಿಸಬೇಕಾಗುತ್ತದೆ. ಇಂತಹ ಒಂದು ಮಹಾಕಾರ್ಯವನ್ನು ಬಿಜಾಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಆಶ್ಚರ್ಯಕರವಾಗುವಷ್ಟು ಸರಳ ರೀತಿಯಲ್ಲಿ ಮಾಡಿದ್ದಾರೆ. ತಮ್ಮ ಸುಂದರ, ಸರಳ ಹಾಗೂ ನೇರ ಭಾಷೆಯ ಮೂಲಕ ಈ ವಚನಗಳ ಭಾವವು ನಮ್ಮ ಮನಸ್ಸನ್ನು ಭೇದಿಸಿ, ಹೃದಯವನ್ನು ತಟ್ಟಿ ಆತ್ಮವನ್ನು ಎಚ್ಚರಗೊಳಿಸುವಂತೆ ಮಾಡಿದ್ದಾರೆ. ಮಾತಿಗೆ ಮೀರಿದ ಅನುಭೂತಿ ಅಥವಾ ಅನುಭಾವದ ಸಾರವನ್ನು ಭಾಷೆಯಲ್ಲಿ ಹಿಡಿಯುವುದು ಎಂತಹ ಸಾಹಸ! ಅಲ್ಲಮರ ಷಟ್ ಸ್ಥಲದ ವಚನಗಳ ಅರ್ಥ-ಸೌರಭವನ್ನು ಆಸ್ವಾದಿಸುವ ಉದ್ದೇಶದಿಂದ ನಡೆದ ಚಿಂತನೆಯ ಫಲವೇ "ಅಲ್ಲಮ ಪ್ರಭುದೇವರ ವಚನ-ನಿರ್ವಚನ." ಇಲ್ಲಿ ಪ್ರತಿ ವಚನದ ಭಾವ ಮತ್ತು ಅದರ ಇಂಗಿತಾರ್ಥವನ್ನು ವಿವರಿಸುವ ಭಾಷ್ಯವಿದೆ. ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ವಚನಾಧ್ಯಯನಿಗಳಿಗೆ ಉಪಯುಕ್ತವಾಗಲೆಂದು ಈ ಗ್ರಂಥವನ್ನು ಪ್ರಕಟಿಸಿದೆ.

ಶಿವಯೋಗಿ ಅಲ್ಲಮಪ್ರಭುದೇವರು ಶಿವಶರಣರಲ್ಲಿ ಅಗ್ರಮಾನ್ಯರಾಗಿದ್ದಾರೆ. ದೀನ ದುರ್ಬಲರನ್ನು ಸಂತೈಸುವ, ಜ್ಞಾನಿಗಳನ್ನು ಎಚ್ಚರಿಸುವ, ಸಾಧಕರಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಅಲ್ಲಮರು ನಾಡಿನಲ್ಲಿ ಸಂಚರಿಸಿದರು. ಶಿವಶರಣರ ಧಾರ್ಮಿಕ ಆಂದೋಲನ ಅನುಭಾವದ ನೆಲೆಗಟ್ಟಿನ ಮೇಲೆ ಮುನ್ನಡೆಯಲು ಅಲ್ಲಮಪ್ರಭುಗಳು ಬಹುಮಟ್ಟಿಗೆ ಕಾರಣರಾಗಿದ್ದಾರೆ.

ಅನರ್ಘ್ಯರತ್ನಗಳಂತಿರುವ ಅಲ್ಲಮರ ವಚನಗಳ ಅಂಕಿತ "ಗುಹೇಶ್ವರ". ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರೇ ತಿಳಿಸಿರುವಂತೆ "ಇದು ಮಾನವನ ಹೃದಯದಲ್ಲಿ ಅಂತರ್ಯಾಮಿಯಾಗಿರುವ ಪರತತ್ತ್ವವನ್ನು ನಿರ್ದೇಶಿಸುವಂತಿದೆ." ಈ ವಚನಗಳು ಪರತತ್ತ್ವವನ್ನು ಅಭಿವ್ಯಂಜಿಸುವ ಅನುಭಾವದ ರಸಘಟ್ಟಿಗಳು. ದೇಹ, ಇಂದ್ರಿಯ, ಮನಸ್ಸು, ಆತ್ಮ, ಪರಮಾತ್ಮ ಮುಂತಾದ ತತ್ತ್ವಗಳಿಗೆ ಸಾಂಕೇತಿಕ ಪದಗಳನ್ನು ಬಳಸಿ ಅಸಂಗತತೆ ಮತ್ತು ವಿರೋಧೋಕ್ತಿಗಳ ಮೂಲಕ ಮಹತ್ವಪೂರ್ಣವಾದ ಅನೇಕ ಬೆಡಗಿನ ವಚನಗಳು ಭಾವ ಮತ್ತು ಇಂಗಿತಾರ್ಥ ಸಹಿತ ದೊರೆಯುವ ಒಂದು ಅಮೂಲ್ಯ ಪುಸ್ತಕ ಇದಾಗಿದೆ.

ಬುದ್ಧಿ ಮತ್ತು ಭಾವಾವೇಶಗಳೆರಡೂ ಸೇರಿ ಅಂತರಂಗದ ಕುಲುಮೆಯಲ್ಲಿ ಪಾಕಗೊಂಡು ಅನುಭಾವದಿಂದ ಹೊರಹೊಮ್ಮಿದ "ಜ್ಯೋತಿರ್ಲಿಂಗ"ಗಳಾಗಿವೆ ಅಲ್ಲಮರ ವಚನಗಳು. ಇವು ಕ್ಲಿಷ್ಟತೆ ಮತ್ತು ನಿಗೂಢತೆಗೆ ಹೆಸರಾಗಿದ್ದು, "ಅವುಗಳನ್ನು ಅರ್ಥೈಸುವ ಕಾರ್ಯ ಬೇರೆ ವಚನಕಾರರ ವಚನಗಳನ್ನು ಅರ್ಥೈಸುವಷ್ಟು ಸುಲಭವಲ್ಲ" ಎಂದಿದ್ದಾರೆ ಶ್ರೀ ಸಿದ್ಧೇಶ್ವರ ಸ್ವಾಮಿಗಳು. ಅವರ ಹೃದ್ಯವಾದ ಭಾಷೆ ಮತ್ತು ಶೈಲಿಗಳಲ್ಲಿ ಈ ಭಾಷ್ಯ ಮೂಡಿ ಬಂದಿದೆ. ಅವರ ವಿಸ್ತಾರವಾದ ಅಧ್ಯಯನ, ಆಳವಾದ ಅರಿವು ಹಾಗೂ ಅನುಭಾವಗಳ ಬೆಳಕಿನಲ್ಲಿ ವಚನಗಳ ಅರ್ಥದ ಆಳಕ್ಕಿಳಿದು ಅಮೂಲ್ಯವಾದ ವಿಚಾರರತ್ನಗಳನ್ನು ಹೊರತೆಗೆದಿದ್ದಾರೆ. ಇವುಗಳ ಅಧ್ಯಯನ ಮಾಡಿದಾಗ ವಚನಗಳ ಅರ್ಥ ಮತ್ತು ಸತ್ತ್ವ ಸ್ಪಷ್ಟವಾಗಿ ತಿಳಿಯುತ್ತದೆ. ಗ್ರಂಥದ ಕೊನೆಯಲ್ಲಿ ನೀಡಿರುವ ಪಾರಿಭಾಷಿಕ ಶಬ್ದಕೋಶ, ಕಠಿಣ ಪದಕೋಶ ಇತ್ಯಾದಿ ಅನುಬಂಧಗಳು ಅಧ್ಯಯನಾಕಾಂಕ್ಷಿಗಳ ಕೆಲಸವನ್ನು ಮತ್ತಷ್ಟು ಸರಳಗೊಳಿಸಿವೆ. ಓದುಗರ ಆಸ್ವಾದನೆಗಾಗಿ ಸಂಸಾರಹೇಯ ಸ್ಥಲದ ಈ ವಚನ :

**ಸಂಸಾರವೆಂಬ ಹೆಣಬಿದ್ದಿರೆ ತಿನಬಂದ ನಾಯಜಗಳವ ನೋಡಿರೆ !**
**ನಾಯಜಗಳವ ನೋಡಿ ಹೆಣವೆದ್ದು ನಗುತ್ತಿದೆ.**
**ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ !**

ಭಾವ : ಅಸಂಖ್ಯ ಭೋಗ ವಿಷಯಗಳಿಂದ ಕೂಡಿದ, ನಮ್ಮ ಸುತ್ತೆಲ್ಲ ಅನಂತವಾಗಿ ಹರವಿದ ವಿಶ್ವವೇ ಸಂಸಾರ. ಇದು ಜಡವಾದುದರಿಂದ "ಹೆಣ" ಎನಿಸಿದೆ. ಇಲ್ಲಿರುವ ಎಲ್ಲವೂ ಆಕರ್ಷಕ. ನೋಡಿದವರ ಕಣ್ಮನಗಳನ್ನು ಸೆಳೆದು ಅನುರಾಗ ಹುಟ್ಟಿಸುತ್ತದೆ. ಕೋಟ್ಯಂತರ ಜೀವಿಗಳು ದೇಹಧರಿಸಿ ಬರುತ್ತಾರೆ. ತಮ್ಮೆದುರು ಹರಡಿದ ಈ ವಿಷಯ ವಿಸ್ತಾರವನ್ನು ಕಂಡು ಅವುಗಳನ್ನು ಸಂಪಾದಿಸಲು ಹಾಗೂ ಉಪಭೋಗಿಸಲು ಹಾತೊರೆಯುತ್ತಾರೆ, ನಿರಾಮಿಷದ ನರಾಸ್ಥಿಗಾಗಿ ಶ್ವಾನಗಳು ಹಾತೊರೆಯುವಂತೆ. ಆ ವಿಷಯಗಳನ್ನು ಯಥೇಚ್ಛವಾಗಿ ದೊರಕಿಸುವಲ್ಲಿ ಮನಸೋಕ್ತ ಉಪಭೋಗಿಸುವಲ್ಲಿ ವ್ಯತ್ಯಯ ಉಂಟಾದರೆ ತಮ್ಮಲ್ಲಿಯೇ ಪರಸ್ಪರ ಪ್ರಾಣದ ಹಂಗು ಹರಿದು ತಮ್ಮ ಹಿರಿಮೆ ಗರಿಮೆಗಳನ್ನು ಮರೆತು ಕಚ್ಚಾಡುತ್ತಾರೆ. ಇವರ ಅವಿವೇಕದ ಕಲಹವನ್ನು ಕಂಡು ಈ ಜಡಪ್ರಪಂಚವು ನಗುತ್ತದೆ. ಆ ವಿಷಯಗಳಲ್ಲಿ ಗುಹೇಶ್ವರಲಿಂಗ ಇಲ್ಲ. ನಿತ್ಯಸತ್ಯವಾದ ಸೌಖ್ಯವನ್ನು ಅವುಗಳಿಂದ ಪಡೆಯಲಾಗದು. ಗುಹೇಶ್ವರಲಿಂಗದ ಅಂಶವೇ ಆದ ಜೀವಿಗಳು ಇದನ್ನು ಮರೆತು ಸಂಸಾರವೆಂಬ ಹೆಣದಲ್ಲಿ ಆ ಸೌಖ್ಯವನ್ನು ಪಡೆಯಬೇಕೆಂದು ಹವಣಿಸುತ್ತಾರೆ. ಅವರ ಈ ನಾಯಿತನವನ್ನು ಕಂಡು ಸಂಸಾರ ಹೆಣ ನಗದೆ ಇನ್ನೇನು ಮಾಡೀತು?

ಅಲ್ಲಮರ ಅಪರೂಪದ ಅನುಭಾವದ ಬೆಡಗಿನ ವಚನಗಳ ವಿಸ್ತಾರವಾದ ಒಳಭಾವವನ್ನೂ ತತ್ತ್ವಜ್ಞಾನವನ್ನೂ ಕಾವ್ಯಮಾಧುರ್ಯವನ್ನೂ ಅಧ್ಯಯನಮಾಡಿ, ಅರಿತು ಅನುಭವಿಸಿದವನು ಧನ್ಯ. ಹಾಗೆ ಮಾಡುವುದಕ್ಕೆ ಈ ಅನರ್ಘ್ಯವಾದ ಕೃತಿ ನೆರವು ನೀಡುತ್ತದೆ. —

ಎಸ್. ಆರ್ ರಮೇಶ್,
**ಸಹಶಿಕ್ಷಕರು, ಶ್ರೀರಾಮಕೃಷ್ಣ ವಿದ್ಯಾಶಾಲೆ. ಮೈಸೂರು**